ಮರೆಸುತ್ತಿದ್ದರು. ಈ ಬಾಲಸ್ವಾಮಿ ಒಂದು ದಿನ ಸಕ್ಕರೆ ಅಚ್ಚು ಮಾಡುತ್ತಿರುವಾಗಲೇ ಕೈಲಿ ಸೌಟು ಹಿಡಿದೇ ಉಸಿರುಗಟ್ಟಿ ಅಸು ನೀಗುತ್ತಾರೆ.

ಊರ ಹೆಂಗಳೆಯರ ಕಂಗಳ ಮಾನ ಕಾಪಾಡಲೆಂದೇ ಊರ ಗಂಡಸರ ಉಡುಪುಗಳನ್ನು ಬೇಕೆಂದೇ ದೊಗಲೆ ಮತ್ತು ಉದ್ದ ಹೊಲಿಯುವ ಟೈಲರ್ ಮಾವಯ್ಯ, ಅಮ್ಮನೊಂದಿಗೆ ಜೋರು ಮಳೆಯ ಹೊಳೆಯಲ್ಲಿ ತೊಳೆಯಲೆಂದು ಒಯ್ದಿದ್ದ ಮನೆಯ ದೇವರ ಮೂರ್ತಿಗಳೆಲ್ಲ ನೀರಲ್ಲಿ ಬಳಿದು ಹೋದಾಗ ಮುಳುಗಿ ಎಲ್ಲವನ್ನೂ ಬಚಾವ್ ಮಾಡಿ ತಂದುಕೊಟ್ಟು ಮನೆ ತಲುಪಿಸಿದ ಅನ್ವರ್, ಜನರನ್ನು ಹೊಳೆ ದಾಟಿಸಲು ಮಾತಿಲ್ಲದೆ ಸದಾ ಕಾಯುತ್ತಲೇ ಒಂಟಿಯಾಗಿ ಇರುವ ಹರಿಗೋಲು ಕೆಂಚ, ಮಕ್ಕಳ ರಂಜನೆಗೆಂದು "ರಾಟೆ ಪಟಾಕಿ" ಉರಿಸುವಾಗ ಮುಖ ಸುಟ್ಟುಕೊಂಡ ಮಾವಯ್ಯ, ಗೊತ್ತಿದ್ದ ಎರಡೇ ಹಾಡುಗಳನ್ನು ಮತ್ತೆಮತ್ತೆ ಓಲಗದಲ್ಲಿ ಊದುವ ಗೆಡ್ಡ, ಅಂದಂದಿನ ಅಡಿಗೆಗೆ ಬೇಕಾಗುವಷ್ಟೆ ಸಾಮಗ್ರಿ ಕೊಳ್ಳುವ ಕೂಲಿ ಕುಟುಂಬ... ಹೀಗೆ ಇಲ್ಲಿಯ ಬಳಗ ದೊಡ್ಡದು. ಈ ಇಡೀ ಬಳಗದ ಕಂಪನ ಕೇಂದ್ರದಂತೆ ಪ್ರಮೀಳಾರ ಅಮ್ಮ ಸುಂದರಮ್ಮ. ಸಂಗೀತ, ಸಮಾಜಸೇವೆ, ಬಂಧುಬಳಗದ ಸೇವೆ, ಗ್ರಾಮದ ಎಲ್ಲರ ಅನಾರೋಗ್ಯಕ್ಕೂ ಕೈಲಾದಷ್ಟು ವೈದ್ಯಕೀಯ ಸೇವೆ, ಸೇವೆ, ಸೇವೆ, ಸೇವೆ – ಅದೇ ಸುಂದರಮ್ಮ. ಪ್ರಮೀಳಾರ ನೋಟದ ಪಾರದರ್ಶಕತೆ ಅಂದೆ. ಅದು ಅವರ ಭಾಷೆಯನ್ನೂ ಎಷ್ಟು ಪಾರದರ್ಶಕ(ಬಾಲಸ್ವಾಮಿಯ ಸಕ್ಕರೆ ಅಚ್ಚಿನಂತೆ)ಗೊಳಿಸಿದೆಯೆಂದರೆ – ಪ್ರಮೀಳಾ ಯಾವಾಗ ಅಮ್ಮ ಆಗುತ್ತಾರೆ, ಅಮ್ಮ ಯಾವಾಗ ಪ್ರಮೀಳಾ ಆಗುತ್ತಾರೆ ಗೊತ್ತೇ ಆಗದಂಥ ಒಂದು ಅವಿನಾಭಾವ ಇದೆ. ಪ್ರಮೀಳಾ ಬರೆಯುತ್ತಾರೆ – "ನನ್ನ ತಂದೆ ಯಾವತ್ತೂ ತಾಯಿಗೆ ಒಂದು ಒಳ್ಳೆ ಮಾತನಾಡುತ್ತಿರಲಿಲ್ಲ. ಆಗಿನ ಕಾಲವೆಲ್ಲ ಹಾಗೆಯೇ ಏನೋ?!" ಈ ಮಾತಿನ ನಿಟ್ಟುಸಿರಿನ ಅನುರಣನ ಅವರ ತಾಯಿಯದ್ದೇ ಅಂತರಂಗದ್ದು ಅನಿಸುತ್ತದೆ. "ಅಮ್ಮನಿಗೆ ಎಲೆಅಡಿಕೆ ತುಂಬಾ ಪ್ರೀತಿ. ತಟ್ಟೆ ತುಂಬಾ ಎಲೆ ಅಡಿಕೆ ಇಟ್ಟುಕೊಂಡು ರಾತ್ರಿ ಮಲಗಿದರೆ, ನಿದ್ದೆ ಬರದಿದ್ದಾಗಲೆಲ್ಲ ಎಲೆ ಅಡಿಕೆ ತಿಂದು ಏಳುವ ಹೊತ್ತಿಗೆ ತಟ್ಟೆ ಖಾಲಿ." "ಊದಿನ ಕಡ್ಡಿ ಸೀರೆಯ ಜೊತೆ ಇಡುತ್ತಿದ್ದರು." – ಹೀಗೆ ತುಂಬ ಪ್ರೀತಿಯಿಂದ ಕಾಯ್ದುಕೊಂಡಿದ್ದ "ಅವರ ವೈಯಕ್ತಿಕ ಲೋಕವೂ ಅವರ ಕೈ ಬಿಟ್ಟು" ಹೋಗುತ್ತದೆ, ಮನೆಯಿಂದ ಮಾಯವಾದ ಹಾರ್ಮೋನಿಯಂನಂತೆ.

ಪ್ರಮೀಳಾರ ಭಾಷೆ, ಒಕ್ಕಣಿಕೆ ಎಷ್ಟು ನಿರಾಡಂಬರವಾದದ್ದೋ ಅಷ್ಟೇ ಸಂಪನ್ನತೆಯದು. ಇಲ್ಲಿ ನಡೆವ ಮಾತುಕತೆಗಳೆಲ್ಲವೂ ಹೊಳೆದಂಡೆಯಲ್ಲಿ ಅಥವಾ ಬಾವಿಕಟ್ಟೆಯ ಬಳಿ, ಗುಟ್ಟೇ ಇಲ್ಲದಂಥ ಒಂದು ಬಗೆಯ ನಿರುಮ್ಮಳತೆಯಲ್ಲಿ. ಗೊರೂರು, ವೀಸಿ, ಪುತಿನ ಅವರ ಗದ್ಯದಲ್ಲಿ ಸಿಗುತ್ತಿದ್ದ ಬಾಳ ತಿಳಿವಿನ ಸರಳ ಸೊಬಗು ಪ್ರಮೀಳಾರ ಒಕ್ಕಣೆಯಲ್ಲಿ ಮತ್ತೆ ಸಿಕ್ಕಿದಂತಾಗಿದೆ. 'ಬೆಳಕಿನ ಹೆಂಚು', 'ಮುತ್ತುಗದ ದೊನ್ನೆಯ ಪರಿಮಳ', 'ಚಾವಟಿಯಂತೆ ಹೆಣೆದ ಜಡೆ', 'ಜಿಂಕೆಗಳಂತೆ ಓಡಾಡಿ ಲೋಪ ಬರದಂತೆ ಬಡಿಸುವ ಎಳೆ ಹುಡುಗರು', 'ಪ್ರವಾಹದಲ್ಲಿ ಹೇಮಾವತಿ ಕೆಂಪಗೆ ಆರತಿ ನೀರು', 'ಸೀರೆಯ ತಲೆದಿಂಬು', 'ಎಡಗೈಲಿ ಟೀಲೋಟ, ಬಲಗೈಯಲ್ಲಿ ಬೀಡಿ ಹಿಡಿದ ಎತ್ತಿನ ವ್ಯಾಪಾರಿಗಳು...' ಈ ಇಂಥ ಒಕ್ಕಣೆ ಅಪ್ಪಟ. ಶಾಮಣ್ಣ ಮಾವಯ್ಯ ಎನ್ನುವವರ ಬಗೆಗಿನ ಮೂರೇ ಪುಟದ ನೆನಪಿನ ಚಿತ್ರಣವೊಂದು ಬರುತ್ತದೆ. ಅದು ಒಂದು ತೀವ್ರವಾದ ಸಣ್ಣಕತೆಯಂತೆ ಕಾಡುವಂತಿದೆ. "ಒಂದು ಸಲ ಮನಸ್ಸು ಬಿಚ್ಚಿ ನಕ್ಕರೆಂದರೆ ಮುಖ ಒಂದು ಟೊಮೆಟೊ ಬಣ್ಣಕ್ಕೆ ತಿರುಗುತ್ತಿದ್ದ"– ಈ ಶಾಮಣ್ಣ ಮಾವಯ್ಯನವರಿಗೆ ನಾಟಕ ಬರೆದು ಆಡಿಸುವ ಗೀಳು. ಊರೂರು ಅಲೆದು ಎಳೆಯರನ್ನು ಸೇರಿಸಿ ನಾಟಕ ಕೂಡ್ರಿಸುತ್ತಿದ್ದರು. ನಾಟಕ ಕಂಪನಿ ಕಟ್ಟಿದರು. ನಂತರದ ಅವರ ವಿಷಾದ ಪರ್ವದ ಬಗ್ಗೆ ಪ್ರಮೀಳಾ ಅತ್ಯಂತ ಘನತೆ ಮತ್ತು ತಿಳಿವಿನಿಂದ ಬರೆಯುತ್ತಾರೆ. "ಹತ್ತಿಪ್ಪತ್ತು ವರ್ಷ ಹೀಗೆ ಕಳೆದರು. ಯಾವುದೂ ಕೈಗೂಡದೆ ಮೌನಿಯಾದರು. ಈ ರೀತಿ ಹೊಡೆತಗಳು ಬಿದ್ದಮೇಲೆ ಮನೆಯ ಮುಂದಿನ